ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - CHM. ಫೋನ್ : 114
8ನೇ ವರ್ಷ 12ನೇ ಸಂಚಿಕೆ ಕೊಪ್ಪ 19-11-1989 ಭಾನುವಾರ ಬೆಲೆ 50 ಪೈಸೆ

ಗೋಪಾಲ ಭಂಡಾರಿ ಕ್ಷೇಮ

ಕೊಪ್ಪ: ಶೃಂಗೇರಿ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಗೋಪಾಲ ಭಂಡಾರಿ ಅವರನ್ನು ತೀರ್ಥಹಳ್ಳಿಯ ನರ್ಸಿಂಗ್ ಹೋಂ ಒಂದಕ್ಕೆ ಸೇರಿಸಿದ್ದು, ಅವರ ಆರೋಗ್ಯದ ಬಗ್ಗೆ ಕಳವಳಕ್ಕೆ ಕಾರಣವಿಲ್ಲನೆಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ತಹಸೀಲ್ದಾರ್ ಮತ್ತು ಸರ್ಕಲ್ ಇನ್ಸ್ಪೆಕ್ಟರ್ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು.

ಪ್ರಮುಖ ಪಕ್ಷಗಳವರು ತನಗೆ ತಲಾ 25 ಸಾವಿರ ರೂ ಹಣ ಕೊಡಬಿದ್ದಲ್ಲಿ ... ನು ಆತ್ಮಹತ್ಯೆ ಮಾಡಿಕೊಂಡು ಚುನಾವಣೆ ಮುಂದೆ ಹೋಗುವಂತೆ ಮಾಡುವುದಾಗಿ ಭಂಡಾರಿ ಬೆದರಿಕೆ ಹಾಕಿದರೆಂಬ ವದಂತಿಗಳ ಬೆನ್ನಲ್ಲೇ ಸ್ವಲ್ಪಮಾನಸಿಕ ಉದ್ವಿಗ್ನತೆ ಕಾಣಿಸಿದ್ದಕ್ಕಾಗಿ ಅವರನ್ನು ಅವರ ಮನೆಯವರು ಆಸ್ಪತ್ರೆಗೆ ಸೇರಿಸಿದ ಸುದ್ದಿಯಿಂದ ಕ್ಷೇತ್ರದಾದ್ಯಂತ ನಾನಾ ಊಹೆ-ವದಂತಿಗಳಿಗೆ (ಚುನಾವಣೆ ಮುಂದಕ್ಕೆ ಹೋಯಿತಂತೆ ಎಂತಲೂ ಸಹ!) ಅವಕಾಶವಾಗಿತ್ತು.

ಶೃಂಗೇರಿ ಕ್ಷೇತ್ರ—'ನಿಗೂಢ' ಮತದಾರರು; ಪಂಚಮುಖ ಸ್ಪರ್ಧೆಯಲ್ಲಿ

ಗೋವಿಂದಗೌಡ — ಶಾಮಣ್ಣ ಹಣಾಹಣಿ

(ತಾತ್ಕಾಲಿಕ ಸಮೀಕ್ಷೆ : ಸಿರಿಮನೆ ನಾಗರಾಜ್ , ಕಲ್ಕುಳಿ ವಿಠಲ ಹೆಗ್ಡೆ)

ಕೊಪ್ಪ: ಈ ಬಾರಿ ಇಡೀ ದೇಶದಲ್ಲೇ ಚುನಾವಣೆಯ ಫಲಿತಾಂಶಗಳ ಕುರಿತು ಮುಂದಾಗಿ ಊಹಿಸುವುದು ಬಹಳ 'ಅಪಾಯಕರ' ಕೆಲಸವಾಗಿದೆಯಂತೆ. ಹಾಗೆಂದು ದೇಶದ ಎಲ್ಲ ಪ್ರಮುಖ ಪತ್ರಿಕೆಗಳೂ ಸುದ್ದಿ ಸಂಸ್ಥೆಗಳೂ ಹೇಳುತ್ತಿವೆ. ಬಿಬಿಸಿ ವಾರ್ತಾ ಸಂಸ್ಥೆ ಕೂಡ ಹೀಗೇ ಹೇಳಿದೆ.

ಇದೇ ಪರಿಸ್ಥಿತಿ ಶೃಂಗೇರಿ ಕ್ಷೇತ್ರದಲ್ಲೂ ಇರುವುದು ಆಶ್ಚರ್ಯವೇನಲ್ಲ. ಕಣದಲ್ಲಿರುವ 10 ಸ್ಪರ್ಧಿಗಳಲ್ಲಿ ಕಾಂಗ್ರೆಸ್, ದಳ, ಜನತಾ, ಸಿಪಿಐ ಮತ್ತು ಪಕ್ಷೇತರ ಅಭ್ಯರ್ಥಿ ರಾಮಪ್ಪಯ್ಯ—ಇವಿಷ್ಟು ಜನರ ಮಧ್ಯೆ ಸ್ಪರ್ಧೆಯಿದೆ. ಇಡೀ ಕ್ಷೇತ್ರದ ಮೂರೂ ತಾಲೂಕುಗಳಲ್ಲಿ ಸುತ್ತಿದಾಗ ಕಂಡು ಬರುವ ಅಂಶಗಳಲ್ಲಿ ಧೈರ್ಯವಾಗಿ ಹೇಳಬಹುದಾದ ಒಂದೇ ಒಂದು ಅಂಶವೆಂದರೆ: ಮುಖ್ಯ ಸ್ಪರ್ಧೆಯಿರುವುದು ಕಾಂಗ್ರೆಸ್ ಮತ್ತು ದಳದ ನಡುವೆಯೇ ಎಂಬುದು.

ಕಾಂಗ್ರೆಸ್ ಮತ್ತು ಜನತಾ ದಳ — ಈ ಎರಡಕ್ಕೂ ಅನುಕೂಲಕರ ಮತ್ತು ಅನನುಕೂಲಕರವಾದ (ಪ್ಲಸ್ ಮತ್ತು ಮೈನಸ್) ಅಂಶಗಳಿವೆ. ಜನತಾ ಪಕ್ಷದಿಂದ ಸ್ಪರ್ಧಿಸಿರುವ ತಲವಾನೆ ಪ್ರಕಾಶ್ ಪಡೆಯುವ ಮತಗಳಲ್ಲಿ ಹೆಚ್ಚಿನಂಶ ಜನತಾ ದಳದ ಪಾಲಿನವು. ಅಂತೆಯೇ ರಾಮಪ್ಪಯ್ಯ ಪಡೆಯಬಹುದಾದ ಮತಗಳಲ್ಲೂ ದೊಡ್ಡ ಪಾಲು ದಳದ ಮತಗಳೇ. ಇವೆರಡೂ ದಳಕ್ಕೆ ಪೆಟ್ಟು ಕೊಡುವ ಅಂಶಗಳು (ಆದ್ದರಿಂದಲೇ, ರಾಮಪ್ಪಯ್ಯ ನಾಮಪತ್ರ ಹಿಂತೆಗೆದುಕೊಳ್ಳಲು ಒಪ್ಪದಿದ್ದಾಗ ಶಾಮಣ್ಣ "ಅವರು ನಿಂತುಕೊಳ್ಳಲಿ ಬಿಡಿ. ಅದರಿಂದ ನನಗೇ ಲಾಭ" ಎಂದರಂತೆ)

ಆದರೆ ರಾಮಪ್ಪಯ್ಯ ಕಾಂಗ್ರೆಸ್ಸಿಗೆ ಕೂಡ ಸ್ವಲ್ಪ ಧಕ್ಕೆ ಕೊಡಲಿದ್ದಾರೆ. ಶೃಂಗೇರಿ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಕಾಂಗ್ರೆಸ್ಸಿಗೆ ಮತ ನೀಡುತ್ತಿದ್ದ ಬಡ ಜನಗಳೂ ಸಹ ಈ ಬಾರಿ 'ಒಂದು ಓಟು ರಾಮಪ್ಪಯ್ಯನಿಗೆ' ಎನ್ನುತ್ತಾರೆ. "ಯಾವ ಹೊತ್ತಿನಲ್ಲಿ, ಏನೇ ಒಂದು ಸಮಸ್ಯೆ ತೆಗೆದುಕೊಂಡು ಹೋದರೂ ತಮ್ಮಿಂದಾಗುವ ಸಹಕಾರ ನೀಡುತ್ತಾರೆ ಒಂದು ಫೋನ್ ಮಾಡಿಯಾದರೂ ವಿಚಾರಿಸುತ್ತಾರೆ". ಇದು ರಾಮಪ್ಪಯ್ಯನವರ ಮುಖ್ಯ 'ಆಸ್ತಿ'.

ತಲವಾನೆ ಪ್ರಕಾಶ್ ಬಗ್ಗೆ ಎಲ್ಲೆಡೆ 'ಸಭ್ಯ, ಯುವಕ, ನಿಷ್ಕಳಂಕ ವ್ಯಕ್ತಿ' ಎಂಬ ಮೆಚ್ಚುಗೆಯಿದೆ. ಅಂತೆಯೇ 18-21ರ ಪ್ರಾಯದ ಹೊಸ ಮತದಾರರ ಸುಮಾರು ಶೇ. ಹತ್ತರಷ್ಟು ಮತಗಳು ಇವರ ಪಾಲಾಗುವ ಸಂಭವವಿದೆ. ಆದರೆ ಉಳಿದಂತೆ ಅವರಿಗೆ ಕೊಪ್ಪ ಹೋಬಳಿಯಲ್ಲಿ ಅಲ್ಲಲ್ಲಿ ಹಾಗೂ ಕ್ಷೇತ್ರದ ಕೆಲವು ಕಡೆಗಳಲ್ಲಿನ ದೇವೇಗೌಡ ನಿಷ್ಠರಾದ ಜನತಾ ಬೆಂಬಲಿಗರ ಅಷ್ಟಿಷ್ಟು ಮತಗಳು ಬೀಳುವುದಕ್ಕಿಂತ ಹೆಚ್ಚು ಕಂಡು ಬರುವುದಿಲ್ಲ.

ಭಾರತ ಕಮ್ಯುನಿಸ್ಟ್ ಪಕ್ಷದ ಎಂ. ಎಲ್. ಸೇವಿಯರ್‌ಗೆ ನ ರಾ. ಪುರ ತಾಲ್ಲೂಕಿನ ಮಲಯಾಳಿ 'ಬೆಲ್ಟ್'ನಲ್ಲಿ ಸ್ವಲ್ಪ ಮಟ್ಟಿಗೆ ಹಾಗೂ ಬಾಳೆಹೊನ್ನೂರು, ಬಸರಿಕಟ್ಟೆ, ಕೊಡಿಗೆಹಿತ್ಲು ತೋಟ ಪ್ರದೇಶಗಳಲ್ಲಿ ಮತ್ತು ಶಂಕರ್ ಕಂಪೆನಿಯಲ್ಲಿ ಸಿಪಿಐಯ ಕಾರ್ಮಿಕ ಸಂಘಟನೆಯ ಬೆಂಬಲ ಸಿಗುವ ನಿರೀಕ್ಷೆಯಿದೆ ಜೊತೆಗೆ ಶೃಂಗೇರಿ, ಕೊಪ್ಪ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಸಿಪಿಐಗೆ ಸಕ್ರಿಯವಾಗಿ ಪ್ರಚಾರ ಮಾಡುತ್ತಿರುವುದೂ ತಕ್ಕಮಟ್ಟಿಗೆ ದಲಿತರ ಒಂದಷ್ಟು ಮತಗಳನ್ನು ಗಳಿಸಿಕೊಡಬಲ್ಲುದು.

ಈ ಪೈಕಿ ಸುಮಾರು ಶೇ. 90 ಭಾಗ ಕಾಂಗ್ರೆಸ್ಸಿಗೆ ಸಿಗಬಹುದಾಗಿದ್ದ ಮತಗಳೇ ಆಗಿರುತ್ತವೆ. ಇದರಿಂದ ಕಾಂಗ್ರೆಸ್ಸಿಗೆ ಸಾಕಷ್ಟು ನಷ್ಟವುಂಟಾಗಲಿದೆ

ಚುನಾವಣೆ ಘೋಷಣೆಯಾದಾಗಲೇ, ಜನತಾ ದಳ ಮಣ್ಣು ಮುಕ್ಕಿದೆಯೆಂದೂ, ಕಾಂಗ್ರೆಸ್ಸಿಗೆ ಈ ಕ್ಷೇತ್ರ ಒಂದು ಸುಲಭದ ಬಳುವಳಿಯಾಗಲಿದೆಯೆಂದೂ ಹೇಳುವಂತಿತ್ತು ಪರಿಸ್ಥಿತಿ. ರಾಜ್ಯದಲ್ಲಿ ಜನತಾ ಸರ್ಕಾರ ದಿವಾಳಿಯಾದದ್ದಲ್ಲದೆ, ಪಕ್ಷ ಛಿನ್ನ ಛಿದ್ರಗೊಂಡ ಕಿತ್ತಾಟದಿಂದ ಎಂದು ಹೋಳಾಗಿ ಕಡೆಗೆ ಸರ್ಕಾರವೇ ಉರುಳಿ ಬಿದ್ದುದು. ಒಂದೆಡೆಯಾದರೆ, ಗೋವಿಂದ ಗೌಡರ ಜನಪ್ರಿಯತೆ ಕುಗ್ಗಿರುವುದೂ, ಜನತಾ ಪಕ್ಷ ಮತ್ತು ದಳ 'ವಿರೋಧಿ' ಮತಗಳನ್ನು ಒಡೆದುಕೊಳ್ಳುವುದೂ ಇದಕ್ಕೆ ಕಾರಣವೆನ್ನಿಸಿತ್ತು. (ಕಾಂಗ್ರೆಸ್ಸಿನ ಪ್ರತಿಷ್ಠೆ, ಜನಪ್ರಿಯತೆ ಹೆಚ್ಚಿದೆ ಎಂದಲ್ಲ!)

ಆದರೆ ಈಗ ಚಿತ್ರ ಸಂಪೂರ್ಣ ಬದಲಾಗಿ ಕಾಣುತ್ತಿದೆ. ಗೋವಿಂದ ಗೌಡರಿಗೆ ಕೊನೇ ಗಳಿಗೆಯಲ್ಲಿ ಎಲ್ಲರೂ ಸೇರಿ ನಿಲ್ಲುವುದು ಅನಿವಾರ್ಯವಾಗಿಸಿದ್ದು, ತನ್ನ ಸೋಲು ಶತಸ್ಸಿದ್ಧ ಎಂದು ಖಾತ್ರಿಯಾಗಿದ್ದರೂ ಪಕ್ಷದ ಮತ್ತು ತನ್ನ ಸ್ವಂತದ ಮರ್ಯಾದೆಗಾಗಿ ಸ್ಪರ್ಧಿಸಿ, ಎಲ್ಲ ಕಷ್ಟ ಹಾಗೂ ನಷ್ಟಗಳನ್ನೂ ಎದುರಿಸಿ ಹೋರಾಡುತ್ತಿರುವ ಅವರ ಛಲ, ಏನೇ ಆದರೂ ಈ ಕ್ಷೇತ್ರ ಕಂಡ ಬೇರೆಲ್ಲ ಶಾಸಕರಿಗಿಂತ ಪ್ರಾಮಾಣಿಕ ಮತ್ತು ಕೆಲಸಗಾರ, ಇಂಥವರನ್ನು ಈ ವಯಸ್ಸಿನಲ್ಲಿ, ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸೋಲಿಸಬಾರದೆಂಬ ಅನುಕಂಪ; ದೇವೇಗೌಡರ ಬೆಂಬಲಿಗರ ಮುಂಚೂಣಿಯಲ್ಲಿದ್ದ ಇವರನ್ನು ಕಡೇ ಗಳಿಗೆಯಲ್ಲಿ 'ಹೆಗಡೆ ಉದುರುವುದೇ ಇಲ್ಲ' ಅನ್ನಿಸಿದಾಗ "ಹಾಗಿದ್ದರೆ ದಳದಲ್ಲೇ ಇದ್ದು, (ಮಂತ್ರಿ ಪದವಿ ಖಾತ್ರಿ ಇದ್ದ ಪ್ರಯುಕ್ತ—) ಕ್ಷೇತ್ರವನ್ನಾದರೂ ಒಳ್ಳೆ ರೀತಿ ಇಟ್ಟುಕೊಳ್ಳಿ" ಎಂದು ಅವರ ಹಿರಿಯ ಸಹೋದ್ಯೋಗಿಗಳೇ ಹೇಳಿ ದಳ ಸೇರುವಂತೆ ಮಾಡಿ, ಈಗ ಕೈಬಿಟ್ಟರೆ ಅವರಿಗೆ ಸುಖಾಸುಮ್ಮನೆ ಕುತ್ತಿಗೆ ಕುಯ್ದಂತೆ ಎಂದು ಬಹುಸುಂದಿ ದೇವೇಗೌಡ-ನಿಷ್ಠ ಒಕ್ಕಲಿಗರಿಗೆ ಅನ್ನಿಸುತ್ತಿರುವುದು—ಇವೆಲ್ಲ ಗೋವಿಂದ ಗೌಡರಿಗೆ ವೈಯಕ್ತಿಕವಾಗಿ ಅಪಾರ ಸಹಾನುಭೂತಿಯ ಅಲೆ ಹುಟ್ಟಿಸಿರುವಂತೆ ಕಾಣುವ ಅಂಶಗಳು. ಜನ ಸಾಮಾನ್ಯರಲ್ಲಿ ಕೂಡ ಅವರ ಬಗ್ಗೆ ಹೀಗೇ ಸಹಾನುಭೂತಿ ಕಂಡು ಬರುತ್ತಿದೆ.

ಜೊತೆಗೆ ಜನತಾ (ಹೆಗಡೆ) ಸರ್ಕಾರ ಕೇವಲ 2 ರೂ. ಬೆಲೆಗೆ ಯಥೇಚ್ಛವೆಂಬಷ್ಟು ಅಕ್ಕಿಯನ್ನು ಕೇಸರಿ ಕಾರ್ಡಿನ ಮಧ್ಯಮ ವರ್ಗದವರಿಗೆ ಕೂಡ ಕಳೆದ 6 ವರ್ಷಗಳಿಂದಲೂ ಕೊಡುತ್ತ ಬಂದಿದ್ದು, "ಕಾಂಗ್ರೆಸ್ ಆಳ್ವಿಕೆ" ಅರ್ಥಾತ್ ರಾಷ್ಟ್ರಪತಿ ಆಳ್ವಿಕೆ ಬಂದೊಡನೆ ಬೆಲೆ ಮೂರಾಗಿದ್ದಲ್ಲದೆ ಅಕ್ಕಿಯ ಪ್ರಮಾಣವೂ ಕಡಿಮೆಯಾದುದು ಹಾಗೂ ಜನತಾ ಸರ್ಕಾರ ರೈತರ ಸಾಲ ಬಡ್ಡಿ ಮನ್ನಾ ಮಾಡಿ, ಬಡ್ಡಿ ದರವನ್ನು ಶೇ. 7ಕ್ಕೆ ಇಳಿಸಿದ್ದು—ಇವು ಬಹುವಾಗಿ ಜನಮನದಲ್ಲಿ ಉಳಿದುಕೊಂಡಿವೆ. ಹೀಗಾಗಿ, ಬಡಬಗ್ಗರು ರಾಜೀವ್ ಗಾಂಧಿಯ 'ಬೋಫೋರ್ಸ್' ವಂಚನೆಯ ಬಗ್ಗೆ ಹೇಗೋ ಹಾಗೇ ಹೆಗಡೆಯ ಟ್ಯಾಪಿಂಗ್, ರೇವಜಿತು, ಹಸಿರುಪಟ್ಟಿ ಇತ್ಯಾದಿ ನೂರೆಂಟು ಕೊಳ್ಳೆಗಳನ್ನೂ ಗಂಭೀರವಾಗಿ ಪರಿಗಣಿಸುವಂತೆ ಕಾಣುವುದಿಲ್ಲ.

ಗೋವಿಂದ ಗೌಡರ ಇಷ್ಟೆಲ್ಲ 'ಪ್ಲಸ್ ಪಾಯಿಂಟ್'ಗಳೆದುರು ಕಾಂಗ್ರೆಸ್ ಸಪ್ಪೆಯಾಗಿ ಕಾಣತೊಡಗಿದೆ. ಅದೇನಿದ್ದರೂ, ತನ್ನ ಪರಂಪರಾಗತ 'ಮತಗಂಟು'ಗಳನ್ನೇ ಬಹುತೇಕ ಅವಲಂಬಿಸಬೇಕಾಗಿದೆ. ಆದರೆ ಈ ಸಂಖ್ಯೆ ಕಮ್ಮಿಯೇನಿಲ್ಲ. ಗೌಡರು ತಮ್ಮೆಲ್ಲ ಪ್ಲಸ್ ಪಾಯಿಂಟ್‌ಗಳಿಂದ ಒಂದೊಂದೇ 'ರನ್' ಗಳಿಸುತ್ತ ತಮ್ಮ 'ಸ್ಕೋರ್' ಏರಿಸಿಕೊಳ್ಳುವಾಗ ಶಾಮಣ್ಣನವರಿಗೆ ಈ ರೀತಿಯ ಬೌಂಡರಿ, ಸಿಕ್ಸರ್‌ಗಳ ಇಡುಗಂಟುಗಳೇ ನೆರವಿಗೆ ಬರುತ್ತವೆ.

ಆದರೆ ಎಲ್ಲೂ ಶಾಮಣ್ಣನವರ ಬಗ್ಗೆ ಯಾವ ರೀತಿಯಲ್ಲೂ ಒಂದೇ ಒಂದು ಸದಭಿಪ್ರಾಯದ, ಮೆಚ್ಚುಗೆಯ ಮಾತನ್ನ ಕೇಳುವುದಿಲ್ಲವೆಂಬುದೊಂದು ದುರಂತ. ಕಾಂಗ್ರೆಸ್ ಬಗ್ಗೆ ಕೂಡ ಅಷ್ಟೇ. ಬೇಕಾದರೆ ದಳವನ್ನು ಬಯ್ಯುತ್ತಾರೆ ಆದರೆ ಕಾಂಗ್ರೆಸ್ಸನ್ನು ಹೊಗಳುವವರಿಲ್ಲ!

ಹೀಗೆ ಏಕಮುಖವಾಗಿ ಏರುತ್ತಿರುವ ಗೋವಿಂದಗೌಡರ ಅಲೆ ಶಾಮಣ್ಣನನ್ನು ಹಿಂದೆ ಹಾಕುವ ಎಲ್ಲ ಲಕ್ಷಣಗಳಿದ್ದರೂ ಅದನ್ನು ಹಾಗೇ ನೆಚ್ಚಿ, "ದಳಕ್ಕೆ ಮೇಲುಗೈ" ಎಂದು ಧೈರ್ಯವಾಗಿ ಹೇಳುವುದು ಮಾತ್ರ ಖಂಡಿತ 'ಅಪಾಯಕರ'ವಾದೀತು!

ಆದ್ದರಿಂದಲೇ ಮೊದಲಿಗೇ ಹೇಳಿದ್ದು: ಹೋರಾಟ ಏನಿದ್ದರೂ ದಳ ಮತ್ತು ಕಾಂಗ್ರೆಸ್ ನಡುವೆ ಎಂದು.

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಡಿ.ಎಂ. ಪುಟ್ಟೇಗೌಡರದೇ ಸ್ಪಷ್ಟ ಮೇಲುಗೈ ಆದರೆ ಕಮ್ಯುನಿಸ್ಟ್ ಪಕ್ಷದ ಬಿ. ಕೆ. ಸುಂದರೇಶ್ ತಮ್ಮ ವೈಯಕ್ತಿಕ ಶುದ್ಧ ವ್ಯಕ್ತಿತ್ವದಿಂದಾಗಿ ಎಲ್ಲ ಜನವರ್ಗದವರಿಂದಲೂ, ಜೊತೆಗೆ ಜನತಾ ಪಕ್ಷ, ದಳ, ತಾರಾದೇವಿ ಬಣ— ಈ ಎಲ್ಲ ಕಡೆಯಿಂದಲೂ ವಿಪುಲವಾಗಿ ಮತ ಗಳಿಸುತ್ತಾರೆ ಶೃಂಗೇರಿ ಕ್ಷೇತ್ರದಲ್ಲೂ ಕೂಡ

20 ರಂದು ಕ್ಷೇತ್ರಕ್ಕೆ ಹೆಗಡೆ, ದೇವೇಗೌಡ

ಕೊಪ್ಪ: ಶೃಂಗೇರಿ ಕ್ಷೇತ್ರಕ್ಕೆ ನ. 18 ರಂದು ನಿಶ್ಚಿತವಾಗಿದ್ದ ದೇವೇಗೌಡರ ಭೇಟಿ ನ 20ರ ಮಧ್ಯಾಹ್ನಕ್ಕೆ ಮುಂದೆ ಹೋಗಿದೆ. ಮಧ್ಯಾಹ್ನ 1 ಗಂಟೆಗೆ ತೀರ್ಥಹಳ್ಳಿಯಿಂದ ಕೊಪ್ಪಕ್ಕೆ ಬಂದು, 2 ಗಂಟೆಗೆ ನ. ರಾ. ಪುರದಲ್ಲಿ ಸಭೆ ನಡೆಸಿ, ನಂತರ ಬಾಳೆಹೊನ್ನೂರು, ಆಲ್ದೂರು ಮಾರ್ಗವಾಗಿ ಚಿಕ್ಕಮಗಳೂರಿಗೆ ತೆರಳುವರು.

ಅದೇ ದಿನ ರಾಮಕೃಷ್ಣ ಹೆಗಡೆ ಅವರೂ ಕ್ಷೇತ್ರದಲ್ಲಿ ಚುನಾವಣಾ ಪ್ರವಾಸ ಮಾಡಲಿದ್ದಾರೆ. ನ 17ರಂದು ವೀರೇಂದ್ರ ... ಕ್ಷೇತ್ರದಲ್ಲಿ ಚುನಾವಣಾ ಭಾಷಣಗಳನ್ನು ಮಾಡಿದರು.

ಚುನಾವಣೆ ಅಂಕಿ-ಅಂಶ : ತಿದ್ದುಪಡಿ


ವಾರ್ತಾ ಮತ್ತು ಪ್ರಚಾರ ಇಲಾಖೆ ಒದಗಿಸಿದ ಅಂಕಿ-ಅಂಶಗಳ ಪ್ರಕಾರ ತಾ 12-11-89ರ ನಮ್ಮ ಸಂಚಿಕೆಯಲ್ಲಿ ಪ್ರಕಟಿಸಿದ ಚುನಾವಣೆ ಕುರಿತ ಅಂಕಿ-ಅಂಶಗಳಲ್ಲಿ ಕೆಲವು ತಿದ್ದುಪಡಿಗಳಿವೆ.

ಶೃಂಗೇರಿ ಕ್ಷೇತ್ರದ ಮತದಾರರ ಸಂಖ್ಯೆ: ಮಹಿಳೆಯರು 57143, ಪುರುಷರು 59415 ಒಟ್ಟು 1,16.558 ಇದರಲ್ಲಿ 18ರಿಂದ 21 ವರ್ಷ ವಯಸ್ಸಿನ 4812 ಮಹಿಳಾ ಮತ್ತು 4161 ಪುರುಷ, ಒಟ್ಟು 8973 ಮತಗಳೂ ಸೇರಿವೆ.


ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿರುವ ಒಟ್ಟು ಮತದಾರರು 9,40 257 ಇದರಲ್ಲಿ ಕಾರ್ಕಳ ಮತ್ತು ಬೆಳ್ತಂಗಡಿ ತಾಲ್ಲೂಕಿನ 232315 ಮತದಾರರೂ ಸೇರಿದ್ದಾರೆ. 1984ರಲ್ಲಿ 677607 ಮತದಾರರಿದ್ದರು.

ಇಂಟಕ್ : ಚುನಾವಣೆ ಬಹಿಷ್ಕಾರ ಹಿಂದಕ್ಕೆ

ಜಯಪುರ: ತೋಟ ಕಾರ್ಮಿಕರ ಬೇಡಿಕೆಗಳು ಈಡೇರದಿರುವುದನ್ನು ಪ್ರತಿಭಟಿಸಿ ತನ್ನ ಸದಸ್ಯರು ಚುನಾವಣೆ ಬಹಿಷ್ಕರಿಸಬೇಕೆಂದು ಈ ಹಿಂದೆ ಘೋಷಿಸಿದ್ದ, ಕಾಂಗ್ರೆಸ್ 'ಇಂಟಕ್'ಗೆ ಸೇರಿದ ಕರ್ನಾಟಕ ಎಸ್ಟೇಟ್ ಲೇಬರ್ ಯೂನಿಯನ್, ಆ ನಿರ್ಧಾರ ಹಿಂತೆಗೆದುಕೊಂಡು ಕಾಂಗ್ರೆಸ್‌ಗೆ ಬೆಂಬಲಿಸಲು ನಿರ್ಧರಿಸಿದೆ.



ಜನತಾ ಪಕ್ಷ (ಜೆ. ಪಿ.)



ಶೃಂಗೇರಿ ಕ್ಷೇತ್ರ

ಮತದಾರರಿಗೊಂದು ಬಹಿರಂಗ ಪತ್ರ

ಆತ್ಮೀಯರೇ,

ಮೊದಲೇ ನಿಮ್ಮನ್ನು ಮುಖತಃ ಭೇಟಿ ಮಾಡಿ ಬೆಂಬಲ ಕೇಳಲು ನನಗೆ ಅಸಾಧ್ಯವಾಯ್ತು. ನಿಮ್ಮೊಂದಿಗೆ ಬೆರೆಯುವ ಆಸೆ ನನಗೆ. ಆದರೆ ದಿಢೀರ್ ಆಗಿ ಘೋಷಣೆಯಾಗಿರುವ ಈ ಚುನಾವಣೆಯ ಹಿನ್ನೆಲೆಯಲ್ಲಿ ಅತ್ಯಲ್ಪ ಸಮಯವಿರುವುದರಿಂದ ಹಾಗೂ ಕ್ಷೇತ್ರದ ವೈಶಾಲ್ಯದ ದೃಷ್ಟಿಯಿಂದ ಪ್ರತಿಯೊಬ್ಬರನ್ನೂ ಸಂಪರ್ಕಿಸಲು ಅಸಾಧ್ಯವಾದುದಕ್ಕೆ ಕ್ಷಮೆ ಇರಲಿ.

ಇದೊಂದು ನಿರ್ಣಾಯಕ ಘಟ್ಟ. ಮೌಲ್ಯಾಧಾರಿತ ರಾಜಕಾರಣ, ಕೈ ಶುದ್ಧ-ಬಾಯಿ ಶುದ್ಧದ ಹೆಸರಿನಲ್ಲಿ ಇಡೀ ಶೃಂಗೇರಿ ಕ್ಷೇತ್ರ ಹಾಗೂ ರಾಜ್ಯವನ್ನು ಜಡತ್ವಕ್ಕೆ, ನಿಷ್ಕ್ರಿಯತೆಗೆ, ಯುವ ಜನಾಂಗವನ್ನು ನಿರುದ್ಯೋಗದತ್ತ ದೂಡಿದ ವರ್ಗ ಒಂದು ಕಡೆ, ಅದೇ ಮೌಲ್ಯ, ಶುದ್ಧತೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಾದ ಯುವ ಕಾರ್ಯಕರ್ತರು, ಅಭಿಮಾನಿಗಳು, ನೊಂದ ಕ್ಷೇತ್ರದ ಜನ ಮತ್ತೊಂದು ಕಡೆ, ದುಡಿಯುವ ಕೈಗಳಿಗೆ ಕೆಲಸದ ನಿರೀಕ್ಷೆಯಲ್ಲಿರುತ್ತ ಉದ್ಯೋಗದ ವಯಸ್ಸು ಮೀರುತ್ತಿರುವ ಯುವ ಜನಾಂಗ ಮಗದೊಂದೆಡೆ. ಈ ಸಂದರ್ಭದಲ್ಲಿ ಈ ಧರ್ಮ ಯುದ್ಧದ ನೇತೃತ್ವವನ್ನು ಇಡೀ ರಾಜ್ಯದಲ್ಲಿ ದೇವೇಗೌಡರ ನೇತೃತ್ವದಲ್ಲಿ ಜನತಾ ಪಕ್ಷ ವಹಿಸಿಕೊಂಡಿದೆ. ಅದೇ ರೀತಿ ಕ್ಷೇತ್ರದ ಹೋರಾಟದ ನಾಯಕತ್ವವನ್ನು ಅಭ್ಯರ್ಥಿಯಾಗಿಸುವ ಮೂಲಕ ನನಗೆ ನೀಡಿದೆ.

ಇಡೀ ಕ್ಷೇತ್ರದಲ್ಲಿ ನಾನು ಗಮನಿಸಿದಂತೆ ಯುವ ಜನಾಂಗ ಹಾಗೂ ಕಡೆಗಣಿಸಲ್ಪಟ್ಟ ಜನ ಈ ಹೋರಾಟದಲ್ಲಿ ಹೆಚ್ಚಿನ ಉತ್ಸಾಹದಿಂದ ನನ್ನೊಂದಿಗೆ ಭಾಗಿಯಾಗುತ್ತಿದ್ದಾರೆ. ಆದರೆ ಮೌಲ್ಯದ ಬಗ್ಗೆ, ಶುದ್ಧದ ಬಗ್ಗೆ ಮಾತನಾಡುವ ಜನ ಈ ಸಂದರ್ಭದಲ್ಲಿ ನನ್ನೊಂದಿಗಿರುವ ಈ ಜನರ ಮೇಲೆ ಹಲ್ಲೆ ನಡೆಸುವುದು, ಬೆದರಿಕೆ ಒಡ್ಡುವುದು, ಜಾತಿ ವೈಶಮ್ಯ ಬಿತ್ತುವುದು, ಹಣ, ಹೆಂಡದ ಹೊಳೆ ಹರಿಸುವುದು, ಮೊದಲಾದ ಎಲ್ಲಾ ನೀಚ ತಂತ್ರಗಳನ್ನೂ ಮಾಡುತ್ತಿರುವ ವರದಿಗಳು ಅಲ್ಲಲ್ಲಿಂದ ಬರುತ್ತಿವೆ. ಆದರೂ ಇದನ್ನೆಲ್ಲಾ ಮೆಟ್ಟಿ ನಿಂತು ಪಕ್ಷ ಹಾಗೂ ನನ್ನೊಡನಿರುವ ನಿಮಗೆ ನನ್ನ ಪ್ರಣಾಮಗಳು.

ವೃತ್ತಿ ರಾಜಕಾರಣಿಯಲ್ಲದ, ಜನತಾ ಪಕ್ಷದ ಅಭ್ಯರ್ಥಿಯಾದ ನನ್ನನ್ನು ಬಹುಮತದಿಂದ ಗೆಲ್ಲಿಸಿದಲ್ಲಿ ಕ್ಷೇತ್ರಕ್ಕೆ, ಜನರಿಗೆ, ಪಕ್ಷಕ್ಕೆ ಮತ್ತು ನನ್ನ ಗೆಲುವಿಗಾಗಿ ದುಡಿದ ಕಾರ್ಯಕರ್ತರಿಗೆ ಸಮಾಧಾನವಾಗುವ ರೀತಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ನಿಷ್ಠೆಯಿಂದ ದುಡಿಯುತ್ತೇನೆ ಎಂದು ನಿಮ್ಮಲ್ಲಿ ಪ್ರಮಾಣ ಮಾಡುತ್ತೇನೆ.

ಇತೀ ವಂದನೆಗಳೊಂದಿಗೆ ನಿಮ್ಮವನೇ ಆದ,

ತಲವಾನೆ ಪ್ರಕಾಶ್

ಜನತಾ ಪಕ್ಷದ ಅಭ್ಯರ್ಥಿ, ಶೃಂಗೇರಿ ಕ್ಷೇತ್ರ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.